JUNE 10, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

**ಮುಖ್ಯಾಂಶಗಳು:**

– **ಕೇಂದ್ರದ** ಜನಪರ ಯೋಜನೆಗಳಿಂದ, ದೇಶದ ಬಡವರ ಸಂಖ್ಯೆಯಲ್ಲಿ, ಗಮನಾರ್ಹ ಇಳಿಕೆ.

– **ಇಂದು ಮುಖ್ಯಮಂತ್ರಿ** ಸಿದ್ದರಾಮಯ್ಯ ಹೊಸ ದಿಲ್ಲಿಗೆ; ಕಾಂಗ್ರೆಸ್ ವರಿಷ್ಠರೊಂದಿಗೆ ಸಮಾಲೋಚನೆ.

–**ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ** ಅಭಿಯಾನ: ರೈತರೊಂದಿಗೆ, ಕೃಷಿ ತಜ್ಞರ ಚರ್ಚೆ.

– **'ವಿಜನ್ ಕರ್ನಾಟಕ'**; ಬೆಳಗಾವಿಯ ಕೆ.ಎಲ್.ಇ. ಸಭಾಂಗಣದಲ್ಲಿ ನಾಳೆಯಿಂದ ಮೂರು ದಿನ ವಿಶೇಷ ಪ್ರದರ್ಶಿನಿ.

<><><>

**ಕೇಂದ್ರ ಸರ್ಕಾರದ ಜನೋಪಯೋಗಿ** ಯೋಜನೆಗಳಿಂದ, ದೇಶದ ಕಡು ಬಡವರ ಸಂಖ್ಯೆ, ಕಳೆದ 11 ವರ್ಷಗಳಲ್ಲಿ ಶೇಕಡ 5 ದಶಾಂಶ 3 ಕ್ಕೆ ಇಳಿಕೆಯಾಗಿದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ. ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಶ್ವ ಬ್ಯಾಂಕ್ ಅಧ್ಯಯನದ ಪ್ರಕಾರ, ದೇಶದಲ್ಲಿ 26 ಕೋಟಿ ಜನ ಕಡು ಬಡತನದಿಂದ ಹೊರಬಂದಿದ್ದಾರೆ. ಕೇಂದ್ರ ಸರ್ಕಾರದ ಜನಪರ ಯೋಜನೆಗಳ ಮೂಲಕ ಬಡತನ ರೇಖೆಗಿಂತ ಕೆಳಗಿದ್ದ ಜನ ಸ್ವಯಂ ಉದ್ಯೋಗಿಗಳಾಗಿದ್ದಾರೆ ಎಂದರು. 11 ವರ್ಷಗಳ ಹಿಂದೆ, ದೇಶದ ಕಡು ಬಡವರ ಸಂಖ್ಯೆ 34 ಕೋಟಿ 44 ಲಕ್ಷ ದಷ್ಟಿತ್ತು ಎಂದು ಹೇಳಿದರು.

<><><>

**ಉಕ್ಕು ಉತ್ಪಾದನೆಯಲ್ಲಿ** ಭಾರತ, ಜಾಗತಿಕವಾಗಿ ಎರಡನೇ ಸ್ಥಾನದಲ್ಲಿದೆ. ಕೇಂದ್ರ ಸರ್ಕಾರದ ಯೋಜನೆಗಳ ಮೂಲಕ ದೇಶಿ ಉತ್ಪಾದನೆ ಹೆಚ್ಚಾಗಿದ್ದು, ಸಂಶೋಧನೆಗೆ ಆದ್ಯತೆ ನೀಡಲಾಗಿದೆ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಖಾತೆ ಸಚಿವ ಎಚ್.ಡಿ ಕುಮಾರಸ್ವಾಮಿ ಹೇಳಿದ್ದಾರೆ. ಕೇಂದ್ರ ಸರ್ಕಾರವು 11 ವರ್ಷ ಪೂರ್ಣಗೊಳಿಸಿದ ಹಿನ್ನೆಲೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಿರುವ ಕುಮಾರಸ್ವಾಮಿ ಅವರು, ಪ್ರಧಾನಿಯವರ ದೂರದೃಷ್ಟಿಯಿಂದ, ಇಂಜಿನಿಯರಿಂಗ್ ವಲಯದಲ್ಲಿ, ಬಂಡವಾಳ ಹೂಡಿಕೆಯ ಮೂಲಕ ಸುಧಾರಣೆ ಸಾಧ್ಯವಾಗಿದೆ ಎಂದರು.

<><><>

**ಸ್ವಚ್ಛ ಹಾಗೂ ಸುಸ್ಥಿರ** ಬೆಂಗಳೂರು ನಿರ್ಮಾಣದತ್ತ, ರಾಜ್ಯ ಸರ್ಕಾರ ಗಮನ ಹರಿಸುತ್ತಿದ್ದು, ಸಮರ್ಪಕ ಘನತ್ಯಾಜ್ಯ ನಿರ್ವಹಣೆ ಹಾಗೂ ಪುರಸಭೆ ಆಡಳಿತ ಬಲಪಡಿಸುವ ನಿಟ್ಟಿನಲ್ಲಿ, ಹೊಸದಿಲ್ಲಿ ಪ್ರವಾಸದಲ್ಲಿರುವ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು, ಗ್ರೇಟರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ, ದಿಲ್ಲಿ ನಗರಸಭೆ ಹಾಗೂ ದಿಲ್ಲಿ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಜೈವಿಕ ತ್ಯಾಜ್ಯ ನಿರ್ವಹಣೆಗೆ ಹೆಸರುವಾಸಿಯಾದ ಓಖ್ಲಾ ಎಸ್.ಎಲ್.ಎಫ್ ಘಟಕಕ್ಕೆ ಭೇಟಿ ನೀಡಿದ ಡಿ.ಕೆ ಶಿವಕುಮಾರ ನೇತೃತ್ವದ ನಿಯೋಗವು, ತಂತ್ರಜ್ಞಾನದ ಬಗ್ಗೆ ಮಾಹಿತಿ ಪಡೆಯಿತು. ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿ ಪ್ರಯಾಣ ಬೆಳೆಸಲಿದ್ದು, ಪಕ್ಷದ ವರಿಷ್ಠರ ಜೊತೆ ಮಹತ್ವದ ಸಭೆ ನಡೆಸಲಿದ್ದಾರೆ.

<><><>

**ಹವಾಮಾನ ವೈಪರಿತ್ಯದಂತಹ,** ಪ್ರಾಕೃತಿಕ ಬದಲಾವಣೆಗಳು ಕೃಷಿ ಕ್ಷೇತ್ರವನ್ನು ಬಾಧಿಸುತ್ತಿದ್ದು, ಕೃಷಿ ಕ್ಷೇತ್ರದ ಹಲವು ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವಲ್ಲಿ, ರೈತರೊಂದಿಗಿನ ಸಂವಾದ ಪ್ರಮುಖ ಪಾತ್ರ ವಹಿಸುತ್ತದೆ ಎಂದು ದಾವಣಗೆರೆ ಕೃಷಿ ವಿಜ್ಞಾನ ಕೇಂದ್ರದ, ಕೀಟಶಾಸ್ತ್ರಜ್ಞ ಡಾಕ್ಟರ ಅವಿನಾಶ ಹೇಳಿದ್ದಾರೆ. ದಾವಣಗೆರೆ ತಾಲೂಕು, ಸಿದ್ದನೂರು ಗ್ರಾಮದಲ್ಲಿ ಆಯೋಜಿಸಲಾಗಿದ್ದ ವಿಕಸಿತ ಕೃಷಿ ಸಂಕಲ್ಪ ಅಭಿಯಾನದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿ** ತಾಲೂಕಿನ, ಗಿರಿಯಾಲ ಗ್ರಾಮದಲ್ಲಿ, ಕೃಷಿ ವಿಶ್ವವಿದ್ಯಾಲಯ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಜರುಗಿತು. ರೈತರೊಂದಿಗೆ ಸಂವಾದ ನಡೆಸಿದ ಕೃಷಿ ವಿಶ್ವವಿದ್ಯಾಲಯದ, ವಿಸ್ತರಣಾ

ಸಹ ನಿರ್ದೇಶಕರಾದ ಡಾಕ್ಟರ ಎಸ್.ಎನ್ ಗದ್ದನಕೇರಿ ಅವರು, ಕೃಷಿಯಲ್ಲಿ ಯಂತ್ರೋಪಕರಣಗಳ ಬಳಕೆ, ಡ್ರೋನ್ ಹಾಗೂ ನ್ಯಾನೋ ತಂತ್ರಜ್ಞಾನದ ಕುರಿತು ಮಾಹಿತಿ ನೀಡಿದರು.

<><><>

**ಕೋಲಾರ ಜಿಲ್ಲೆ, ಮುಳಬಾಗಿಲು ತಾಲೂಕು,** ದುಗ್ಗಸಂದ್ರ ಹೋಬಳಿಯ, ಕೊಲದೇವಿ ಹಾಗೂ ಅಗರ ಗ್ರಾಮಗಳಲ್ಲಿ ಜರುಗಿದ ವಿಕಸಿತ ಕೃಷಿ ಸಂಕಲ್ಪ ಅಭಿಯಾನದಲ್ಲಿ ಪಾಲ್ಗೊಂಡು ಮಾತನಾಡಿದ, ಕೃಷಿ ವಿಜ್ಞಾನ ಕೇಂದ್ರ, ಸಸ್ಯ ಸಂರಕ್ಷಣೆ ವಿಭಾಗದ ವಿಜ್ಞಾನಿ, ಡಾಕ್ಟರ ಮಂಜುನಾಥ ರೆಡ್ಡಿ, ಸಮರ್ಪಕ ಬೀಜೋಪಚಾರ ಮಾಡುವ ಮೂಲಕ, ಮಣ್ಣಿನಿಂದ ಬರುವ ರೋಗಗಳ ಹತೋಟಿ ಸಾಧ್ಯವಿದೆ ಎಂದರು.

<><><>

**ದೇಶದ ಅಭಿವೃದ್ಧಿಯಲ್ಲಿ ಕೇಂದ್ರ** ಸರ್ಕಾರದ ಜನಪರ ಯೋಜನೆಗಳ ಮಹತ್ವದ ಪಾತ್ರ, ಯಶಸ್ವಿ ಅನುಷ್ಠಾನ ಸೇರಿದಂತೆ, ವಿವಿಧ ಇಲಾಖೆಗಳ ಸಾಧನೆಯ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡುವ ಉದ್ದೇಶದಿಂದ, ಬೆಳಗಾವಿಯಲ್ಲಿ 'ವಿಜನ್ ಕರ್ನಾಟಕ' ಪ್ರದರ್ಶನವನ್ನು, ನಾಳೆಯಿಂದ ಮೂರು ದಿನಗಳ ಕಾಲ, ಕೆ.ಎಲ್.ಇ ಸೊಸೈಟಿ ಸಭಾಂಗಣದಲ್ಲಿ ಆಯೋಜಿಸಲಾಗುತ್ತಿದೆ ಎಂದು ಸಂಸದ ಜಗದೀಶ ಶೆಟ್ಟರ ತಿಳಿಸಿದ್ದಾರೆ. ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆ, ಜಲಶಕ್ತಿ ಸಚಿವಾಲಯ, ಭಾರತೀಯ ರಿಸರ್ವ ಬ್ಯಾಂಕ್, ರೇಲ್ವೆ, ರಕ್ಷಣಾ ಇಲಾಖೆಗಳು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

<><><>

**ಸೇವೆ, ಸುಶಾಸನ ಮತ್ತು ಬಡವರ** ಕಲ್ಯಾಣದ ತತ್ವಗಳ ಆಧಾರದ ಮೇಲೆ, ಭಾರತ, ಕಳೆದ ಒಂದು ದಶಕದಲ್ಲಿ ಗಮನಾರ್ಹ ಬದಲಾವಣೆ ಸಾಧಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಕಳೆದ 11 ವ ’ಗಳಲ್ಲಿ, ಪ್ರಮುಖ ಕ್ಷೇತ್ರಗಳಲ್ಲಿ ಗಣನೀಯ ಸುಧಾರಣೆ ಸಾಧ್ಯವಾಗಿಸಿದೆ. ಆಕಾಶವಾಣಿಯ ಪ್ರಾದೇಶಿಕ ಸುದ್ದಿ ವಿಭಾಗ, ಕೇಳುಗರಿಗಾಗಿ, ವಿಶೇ ’ ಸುದ್ದಿಗಳನ್ನು ಹೊತ್ತು ತರುತ್ತಿದೆ. ಇಂದು, ಪರಿಸರ ಸಂರಕ್ಷಣೆ ಮತ್ತು ಅಭಿವೃದ್ಧಿ ವಿಷಯದತ್ತ, ಈ ವರದಿ ಕೇಂದ್ರೀಕರಿಸಿದೆ.

*****

*ಭಾರತ, ಪರಿಸರ ಸಂರಕ್ಷಣೆಯನ್ನು, ಸಮಗ್ರ ಅಭಿವೃದ್ಧಿಯೊಂದಿಗೆ ಸಂಯೋಜಿಸುವ, ನೂತನ ಅಭಿವೃದ್ಧಿ ಮಾದರಿಯನ್ನು, ಕಳೆದ ಒಂದು ದಶಕದಲ್ಲಿ, ಅಳವಡಿಸಿಕೊಂಡಿದೆ. ನದಿಗಳನ್ನು ಪುನರುಜ್ಜೀವಿತ ಗೊಳಿಸುವುದರಿಂದ ಹಿಡಿದು, ಪಾರಿಸಾರಿಕ ಸೂಕ್ಷ್ಮ ಕೊಂಡಿಗಳನ್ನು, ಪುನಃಸ್ಥಾಪಿಸಿ, ಹಸಿರು ಮೂಲಸೌಕರ್ಯವನ್ನು ರಚಿಸುವ ವರೆಗೆ, ಬಲವಾದ ಬದ್ಧತೆ ತೋರಿದೆ. ನಮಾಮಿ ಗಂಗೆ ಮಿ ’ನ್, ವಿಶ್ವದ ಅತಿ ದೊಡ್ಡ ನದಿಯ ಪುನರುಜ್ಜೀವನ ಕಾರ್ಯಕ್ರಮಗಳಲ್ಲಿ ಒಂದು. ಗಂಗೆಯ ನೀರಿನ ಗುಣಮಟ್ಟವನ್ನು ಸುಧಾರಿಸಿ, ಜೀವವೈವಿಧ್ಯತೆಯನ್ನು ಹೆಚ್ಚಿಸಿದೆ. ಗಂಗಾ ನದಿಯ ಪುನರುಜ್ಜೀವನದಲ್ಲಿ, ಸ್ಥಳೀಯರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಿದೆ. ಸ್ವಚ್ಛ ಭಾರತ ಮಿ ’ನ್ ಮತ್ತು ಗೋವರ್ಧನ್ ಯೋಜನೆಗಳು, ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆಯನ್ನು, ವಿಶೇ ’ವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಗಮನಾರ್ಹವಾಗಿ, ಪರಿವರ್ತಿಸಿವೆ. ಗೋವರ್ಧನ್ ಯೋಜನೆ, ಸಾವಯುವ ತ್ಯಾಜ್ಯವನ್ನು ಜೈವಿಕ ಅನಿಲ ಮತ್ತು ಗೊಬ್ಬರವಾಗಿ ಪರಿವರ್ತಿಸುವುದನ್ನು ಉತ್ತೇಜಿಸುತ್ತದೆ, ಸ್ವಚ್ಛತೆ ಮತ್ತು ಇಂಧನ ಸ್ವಾವಲಂಬನೆ, ಎರಡನ್ನೂ ಬೆಂಬಲಿಸುತ್ತದೆ. "ಏಕ್ ಪೆಡ್ ಮಾ ಕೆ ನಾಮ್" ನಂತಹ ಅಭಿಯಾನಗಳು, ನಾಗರಿಕರನ್ನು ಪರಿಸರ ವೃಕ್ಷಾರೋಪಣ ಹಾಗೂ ಪರಿಸರ ಕಾಳಜಿಯೆಡೆಗೆ ಸಜ್ಜುಗೊಳಿಸಿವೆ. ದೇಶಾದ್ಯಂತ 142 ಕೋಟಿಗೂ ಹೆಚ್ಚು ಮರಗಳನ್ನು ನೆಡಲಾಗಿದೆ, ಇದು ಇಂಗಾಲದ ಹೀರಿಕೊಳ್ಳುವಿಕೆ ಮತ್ತು ಪರಿಸರ ಪುನಃಸ್ಥಾಪನೆಗೆ ಕೊಡುಗೆ ನೀಡುತ್ತಿದೆ. ಭಾರತ, ವನ್ಯಜೀವಿ ಸಂರಕ್ಷಣೆಯಲ್ಲಿಯೂ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಪ್ರೊಜೆಕ್ಟ್ ಚೀತಾ, ಪ್ರೊಜೆಕ್ಟ್ ಲಾಯನ್ ಮತ್ತು ವಿಸ್ತರಿತ ಪ್ರೊಜೆಕ್ಟ್ ಟೈಗರ್‌ನಂತಹ ಉಪಕ್ರಮಗಳು, ಆವಾಸ ಸ್ಥಾನಗಳ ಅಭಿವೃದ್ಧಿ ಮತ್ತು ಪ್ರಜಾತಿಗಳ ಚೇತರಿಕೆಯ ಮೇಲೆ ಕೇಂದ್ರೀಕರಿಸಿದೆ. ಭಾರತ, ಈಗ 3 ಸಾವಿರದ 682 ಹುಲಿಗಳನ್ನು ಹೊಂದಿದ್ದು, ವಿಶ್ವದ ಹುಲಿಗಳ ಸಂಖ್ಯೆಯ ಶೇಕಡ 75 ಕ್ಕಿಂತ ಹೆಚ್ಚು, ಹೊಂದಿದ ಹಿರಿಮೆಗೆ ಪಾತ್ರವಾಗಿದೆ. ಭಾರತ, ಪ್ರಸ್ತುತ 91 ರಾಮ್‌ಸ್ಸಾರ್ ತಾಣಗಳನ್ನು ಹೊಂದಿದೆ, ಇದು ಏ ್ಯದಲ್ಲಿ ಅತೀ ಹೆಚ್ಚು. ಇತ್ತೀಚಿನ ಸೇರ್ಪಡೆಗಳು – ಫಲೋಡಿಯಲ್ಲಿನ ಖಿಚಾನ್ ಮತ್ತು ಉದಯಪುರದ ಮೆನಾರ್, ಎರಡೂ ರಾಜಸ್ಥಾನದಲಿವೆ. ಪ್ರಮುಖ ಜೌಗು ಪ್ರದೇಶಗಳನ್ನು ರಕ್ಷಿಸುವ ರಾಷ್ಟ್ರದ ಬದ್ಧತೆಯನ್ನು ಮತ್ತ ಷ್ಟ ಬಲಪಡಿಸುತ್ತವೆ. ಕರಾವಳಿ ಮತ್ತು ಜೌಗು ಪ್ರದೇಶ ಸಂರಕ್ಷಣೆ, ವೇಗ ಪಡೆದಿದೆ. 13 ಭಾರತೀಯ ಕಡಲತೀರಗಳು, ಪ್ರತಿಷ್ಠಿತ ಬ್ಲೂ ಫ್ಲ್ಯಾಗ್ ಪ್ರಮಾಣೀಕರಣ ಗಳಿಸಿವೆ, ಆದರೆ ಅಮೃತ್ ಧರೋಹರ್ ಮತ್ತು ಒಖಖಊಖಿಖ ಯಂತಹ ಯೋಜನೆಗಳು ಹವಾಮಾನ ಸ್ಥಿತಿಸ್ಥಾಪಕತ್ವಕ್ಕೆ ನಿರ್ಣಾಯಕವಾದ, ಜೌಗು ಪ್ರದೇಶಗಳು ಮತ್ತು ಮ್ಯಾಂಗ್ರೋವ್‌ಗಳ ಕಾಡುಗಳ*

*ಸಂರಕ್ಷಣೆಯನ್ನು ಮುನ್ನಡೆಸುತ್ತಿವೆ. ಭಾರತದ ಹಸಿರು ಪರಿವರ್ತನೆ ನೀತಿ, ಉಪಕ್ರಮಕ್ಕಿಂತ ಹೆಚ್ಚಿನದು. ಇದು ಜನರ ಚಳವಳಿ, ಗ್ರಹಗಳ ಜವಾಬ್ದಾರಿ ಮತ್ತು ಭವಿ ್ಯದ ಪೀಳಿಗೆಗೆ ಭರವಸೆಯಾಗಿದೆ.*

<><><>

**ಖ್ಯಾತ ಸರೋದ್ ವಾದಕ, ದಿವಂಗತ** ಪಂಡಿತ ರಾಜೀವ ತಾರಾನಾಥ ಅವರ ಪ್ರಥಮ ಪುಣ್ಯಸ್ಮರಣೆಯ ಅಂಗವಾಗಿ, ಹುಬ್ಬಳ್ಳಿಯ ಡಾಕ್ಟರ ಗಂಗೂಬಾಯಿ ಹಾನಗಲ್ ವರ ನಿವಾಸದಲ್ಲಿ, ಇಂದು ಸಂಜೆ 5.30ಕ್ಕೆ ನುಡಿನಮನ ಆಯೋಜಿತವಾಗಿದೆ.

<><><>

**ರಾಜ್ಯ ಹವಾಮಾನ ಇಲಾಖೆ** ಮುನ್ಸೂಚನೆ ಹಿನ್ನೆಲೆ, ಧಾರವಾಡ ಜಿಲ್ಲೆಯಲ್ಲಿ ಮುಂದಿನ ಎರಡು ದಿನಗಳ ಕಾಲ ಆರೆಂಜ್ ಅಲರ್ಟ್ ಹಾಗೂ ಒಂದು ದಿನ ರೆಡ್ ಅಲರ್ಟ್ ಘೋಷಿಸಲಾಗಿದೆ. ಬೆಣ್ಣಿಹಳ್ಳ ಹಾಗೂ ತುಪ್ಪರಿಹಳ್ಳ ಅಚ್ಚುಕಟ್ಟು ಪ್ರದೇಶಗಳಲ್ಲಿನ ಜನರಿಗೆ ಜಾಗ್ರತಾ ನಿರ್ದೇಶನ ನೀಡಲಾಗಿದೆ.

<><><>

**ಭಾರತೀಯ ಸೇನೆ,** ಅಧಿಕಾರಿಗಳಾದ ಮೇಜರ್ ಬಸವ ಪ್ರಭು ಹಾಗೂ ಸಂಜೀವ್ ಸಾಧುನವರ್ ನೇತೃತ್ವದ ತಂಡವು, ರಾಯಚೂರ ಜಿಲ್ಲೆಯ, ಪ್ರವಾಹಕ್ಕೆ ತುತ್ತಾಗಬಹುದಾದ ಗ್ರಾಮಗಳಿಗೆ ತೆರಳಿ, ಪರಿಶೀಲನೆ ನಡೆಸಿತು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

– **ಕೇಂದ್ರದ** ಜನಪರ ಯೋಜನೆಗಳಿಂದ, ದೇಶದ ಬಡವರ ಸಂಖ್ಯೆಯಲ್ಲಿ, ಗಮನಾರ್ಹ ಇಳಿಕೆ.

– **ಇಂದು ಮುಖ್ಯಮಂತ್ರಿ** ಸಿದ್ದರಾಮಯ್ಯ ಹೊಸ ದಿಲ್ಲಿಗೆ; ಕಾಂಗ್ರೆಸ್ ವರಿಷ್ಠರೊಂದಿಗೆ ಸಮಾಲೋಚನೆ.

–**ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ** ಅಭಿಯಾನ: ರೈತರೊಂದಿಗೆ, ಕೃಷಿ ತಜ್ಞರ ಚರ್ಚೆ.

– **'ವಿಜನ್ ಕರ್ನಾಟಕ'**; ಬೆಳಗಾವಿಯ ಕೆ.ಎಲ್.ಇ. ಸಭಾಂಗಣದಲ್ಲಿ ನಾಳೆಯಿಂದ ಮೂರು ದಿನ ವಿಶೇಷ ಪ್ರದರ್ಶಿನಿ.

<><><>